ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ "ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸರ್ಕಾರಿ ವೇತನ ಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ ನೌಕರರಿಗೆ 6ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿಯನ್ನು ಇದುವರೆವಿಗೂ ಮಂಜೂರು ಮಾಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ" ಎಂಬುದರ ಕುರಿತು ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಹಿಂದೂ ಧಾರ್ಮಿಕ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:

* * * * *

**ಉತ್ತರ:-**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು 2002ರ ನಿಯಮಗಳು ದಿನಾಂಕ: 01-05-2003ರಿಂದ ಜಾರಿಗೆ ಬಂದಿದ್ದು, ತದನಂತರ ತಿದ್ದುಪಡಿ ಅಧಿನಿಯಮ 2011 ದಿನಾಂಕ: 27-01-2012 ಜಾರಿಗೆ ಬರುವ ಮೊದಲೇ ಅಂದರೆ ಸರ್ಕಾರದ ಆದೇಶ ಸಂಖ್ಯೆ: ಕಂಇ 437 ಎಂಇಟಿ 83 ದಿನಾಂಕ: 04-12-1997ರಲ್ಲಿ ಕೆಲವು ದೇವಾಲಯದ ನೌಕರರುಗಳಿಗೆ ಪ್ರಥಮ ಬಾರಿಗೆ ದ್ವಿ.ದ.ಸ./ಬೆರಳಚ್ಚುಗಾರರಿಗೆ ನಿಗದಿಪಡಿಸಿರುವ ಸರ್ಕಾರಿ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗಿರುತ್ತದೆ. ತದನಂತರದ ವಿವಿಧ ಆದೇಶಗಳಲ್ಲಿ ಗ್ರೂಪ್ 'ಡಿ' ವೇತನ ಶ್ರೇಣಿಯನ್ನು ಸಹ ಮಂಜೂರು ಮಾಡಿದ್ದು, ಸರ್ಕಾರದ ಪತ್ರ ಸಂಖ್ಯೆ: ಕಂಇ 84 ಮುಸೇವಿ 2006 ದಿನಾಂಕ: 02-09-2006ರ ಅಧಿಕಾರ ಪ್ರತ್ಯಾಯೋಜನೆಯ ರೀತ್ಯಾ ಧಾರ್ಮಿಕ ದತ್ತಿ ಆಯುಕ್ತರ ಹಂತದಲ್ಲಿಯೂ ಸಹ ನೌಕರರುಗಳಿಗೆ ಸರ್ಕಾರಿ ವೇತನ ಶ್ರೇಣಿಯನ್ನು ಮಂಜೂರು ಮಾಡಿದ್ದು, ದಿನಾಂಕ: 27-01-2012ರಂದು ತಿದ್ದುಪಡಿ ಕಾಯ್ದೆ/ನಿಯಮ ಜಾರಿಗೆ ಬಂದಿದ್ದರಿಂದ ಕಾಯ್ದೆಯ ನಿಯಮ 8(2)(1)ರ ಕೋಷ್ಟಕದಲ್ಲಿರುವಂತೆ ವೇತನ ಶ್ರೇಣಿಯನ್ನು ನಿಗದಿಪಡಿಸಬೇಕಾಗಿದುದ್ದರಿಂದ, ಆನಂತರ ಯಾವುದೇ ದೇವಾಲಯದ ನೌಕರರಿಗೆ ಸರ್ಕಾರಿ ವೇತನ ಶ್ರೇಣಿಯನ್ನು ಮಂಜೂರು ಮಾಡಿರುವುದಿಲ್ಲ.

ಮುಂದುವರೆದು ಸರ್ಕಾರದ ಪತ್ರ ಸಂಖ್ಯೆ: ಕಂಇ 84 ಮುಸೇವಿ 2006, ದಿನಾಂಕ: 02-09-2006ರಲ್ಲಿ ವಿವಿಧ ದೇವಾಲಯಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಗ್ರೂಪ್ 'ಡಿ' ವೇತನ ಶ್ರೇಣಿಯನ್ನು ಸರ್ಕಾರದಿಂದಲೇ ನಿರಂತರವಾಗಿ 2006 ರವರೆಗೆ ಮಂಜೂರು ಮಾಡುತ್ತಾ ಬಂದಿದ್ದು, ದೇವಾಲಯದ ನೌಕರರಿಗೆ ಸಮೂಹ 'ಸಿ' ಮತ್ತು 'ಡಿ' ದರ್ಜೆಯ ಸರ್ಕಾರಿ ವೇತನ ಶ್ರೇಣಿ ಮಂಜೂರು ಮಾಡುವ ಅಧಿಕಾರವನ್ನು ಧಾರ್ಮಿಕ ದತ್ತಿ ಆಯುಕ್ತರಿಗೆ ಕೆಳಕಂಡ ಷರತ್ತುಗಳಿಗೊಳಪಡಿಸಿ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಅ) ನೌಕರರ ವಿದ್ಯಾರ್ಹತೆ, ಮೂಲ ಪ್ರಮಾಣ ಪತ್ರವನ್ನು ಪರಿಶೀಲಿಸಿ ನೈಜತೆಯನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

ಆ) ವೇತನ ಶ್ರೇಣಿ ಮಂಜೂರಾತಿಯಿಂದ ಉಂಟಾಗುವ ಸಂಪೂರ್ಣ ವೆಚ್ಚವನ್ನು ಸಂಬಂಧಿಸಿದ ಸಂಸ್ಥೆಯಿಂದಲೇ ಭರಿಸತಕ್ಕದ್ದು.

ಇ) ವೇತನ ಶ್ರೇಣಿ ನೀಡುವುದರಿಂದ ಅಂತಹ ನೌಕರರಿಗೆ ಸರ್ಕಾರಿ ನೌಕರಿ ಅಥವಾ ಸೌಲಭ್ಯಗಳ ಬಗ್ಗೆ ಯಾವುದೇ ಹಕ್ಕು ಇರತಕ್ಕದ್ದಲ್ಲ.

. . . . 2

ಇ) ನೌಕರರ ವಿದ್ಯಾರ್ಹತೆಗೆ ತಕ್ಕಂತೆ ಹೆಚ್ಚಿನ ಕಾರ್ಯಭಾರವನ್ನು ವಹಿಸತಕ್ಕದ್ದು.

ಉ) ವೇತನ ಶ್ರೇಣಿ ಮಂಜೂರು ಮಾಡಿದ ನಂತರ ಸಂಬಂಧಿಸಿದ ಸಂಸ್ಥೆಗೆ ಆರ್ಥಿಕ ತೊಂದರೆ ಕಂಡು ಬಂದಲ್ಲಿ ಅಂತಹ ಹುದ್ದೆಯನ್ನು ಹೆಚ್ಚು ಆದಾಯವಿರುವ ದೇವಾಲಯಕ್ಕೆ ವರ್ಗಾಯಿಸತಕ್ಕದ್ದು.

ಊ) ವೇತನ ಶ್ರೇಣಿ ಮಂಜೂರು ಮಾಡುವ ಮುನ್ನ ಸದರಿ ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರುವುದೇ ಎಂಬುದನ್ನು ಹಾಗೂ ಅಂತಹ ಸಂಸ್ಥೆಯ ವಾರ್ಷಿಕ ವರಮಾನದಲ್ಲಿ ನೌಕರರ ವೇತನಕ್ಕಾಗಿ ಶೇಕಡ 35ರಷ್ಟು ಭಾಗ ಮೀರುವುದಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

ಅದರಂತೆ ಇಲಾಖೆಯ ವ್ಯಾಪ್ತಿಗೆ ಬರುವ ವಿವಿಧ ದೇವಾಲಯಗಳಲ್ಲಿ 05 ವರ್ಷ ಸೇವಾವಧಿಯನ್ನು ಪೂರೈಸಿರುವ ನೌಕರರುಗಳಿಗೆ ಸರ್ಕಾರದಿಂದ ದಿನಾಂಕ: 02-09-2006ರ ಅಧಿಕಾರ ಪ್ರತ್ಯಾಯೋಜನೆ ಆದೇಶದನ್ವಯ ಧಾರ್ಮಿಕ ದತ್ತಿ ಆಯುಕ್ತರ ಆದೇಶದಂತೆ ಕೆಳಕಂಡಂತೆ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗಿರುತ್ತದೆ.

| ಕ್ರ. ಸಂ. | ದೇವಾಲಯಗಳ ಪ್ರವರ್ಗ | ವೇತನ ಶ್ರೇಣಿ ಪಡೆಯುತ್ತಿರುವವರ ಸಂಖ್ಯೆ |
|---|---|---|
| 1 | 'ಎ' | 1065 |
| 2 | 'ಬಿ' | 46 |
| | ಒಟ್ಟು | **1111** |

ಈ ನಡುವೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳು, 2002 ದಿನಾಂಕ: 01-05-2003 ರಿಂದ ಜಾರಿಗೆ ಬಂದಿದ್ದು ಮತ್ತು ತಿದ್ದುಪಡಿ ಅಧಿನಿಯಮ 2011 ದಿನಾಂಕ: 27-01-2012 ರಿಂದ ಜಾರಿಗೆ ಬಂದಿರುತ್ತದೆ. ಈ ಅವಧಿಯಲ್ಲಿ ಹಲವಾರು ನೌಕರರುಗಳನ್ನು ನೇಮಕಾತಿ ನಿಯಮಗಳನ್ನು ಅನುಸರಿಸದೇ ತಾತ್ಕಾಲಿಕ ನೆಲೆಯಲ್ಲಿ ಅಂದರೆ, ಸಂಚಿತ, ವೋಚರ್, ಎನ್.ಎಂ.ಆರ್. ದಿನಗೂಲಿ, ಹಂಗಾಮಿ, ನಿಗದಿತ ವೇತನ, ಕಾರ್ಯಾರ್ಥ ಏರ್ಪಾಟು ಇನ್ನಿತರೆ ವಿಧಾನಗಳ ಮೂಲಕ ಆಯಾ ದೇವಾಲಯಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಅವರುಗಳು ಹಲವಾರು ವರ್ಷಗಳ ಸೇವೆಯನ್ನು ಸಲ್ಲಿಸಿದ್ದು, ಹೀಗೆ ನೇಮಕಾತಿಯಾಗಿರುವ ನೌಕರರಿಗೂ ಸಹ ವೇತನ ಶ್ರೇಣಿ ನೀಡುವಂತೆ ಬೇಡಿಕೆ ಇತ್ತು.

ಆದರೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ ಮತ್ತು ತಿದ್ದುಪಡಿ ನಿಯಮಗಳು 2012ರ ನಿಯಮ 8(2)(i)ರ ಕೋಷ್ಟಕದಲ್ಲಿ, ನಿಗದಿಪಡಿಸಿರುವ ವೇತನವು ಬಹಳ ಕಡಿಮೆ ಇದ್ದು ಈ ವೇತನದಲ್ಲಿ ನೌಕರರುಗಳ ಜೀವನ ನಿರ್ವಹಣೆಯು ಕಷ್ಟಕರವಾದ್ದರಿಂದ, ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 54 ಮುಸೇವಿ 2017 ದಿನಾಂಕ: 06-07-2018ರಂದು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 07-12-2018ರಂದು ವರದಿ ಸಲ್ಲಿಸಿದ್ದು, ಇದರಲ್ಲಿ ವೇತನ ಶ್ರೇಣಿ ನಿಗದಿಪಡಿಸಬೇಕಾದ ನೌಕರರ ಸಂಖ್ಯೆ 2,568 ಎಂದು ಗುರುತಿಸಿರುತ್ತದೆ. ಆದರೆ ಇದರಲ್ಲಿ ಬಹಳಷ್ಟು

. . . . 3

ಮಂದಿಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 9 ಮತ್ತು ನಿಯಮಗಳು 2002ರ ನಿಯಮ 12ರನ್ವಯ ನೇಮಕಾತಿ ವಿಧಾನವನ್ನು ಅನುಸರಿಸದೆ ನಿಯಮಬಾಹಿರವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ಕೆಲವು ದೇವಾಲಯಗಳಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಹೀಗೆ ವೇತನ ಶ್ರೇಣಿ ನೀಡಬೇಕಾದ ಸಿಬ್ಬಂದಿಗಳು ಸುಮಾರು 2568ಕ್ಕೂ ಅಧಿಕ ಮಂದಿ ಇರುತ್ತಾರೆಂದು ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ.

ಸದರಿ ವರದಿಯನ್ನು ಸರ್ಕಾರವು ಪರಿಶೀಲಿಸಿ, ವೇತನ ಶ್ರೇಣಿ ನಿಗದಿಯಾಗದೇ ತಾತ್ಕಾಲಿಕ ನೆಲಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸುಮಾರು 2568ಕ್ಕೂ ಅಧಿಕ ಮಂದಿ ದೇವಾಲಯ ನೌಕರರುಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ನಿಯಮಗಳು 2019ನ್ನು ದಿನಾಂಕ: 17-07-2019ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ. ಅದರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯ/ಸಂಸ್ಥೆಗಳಲ್ಲಿ ವೇತನ ಶ್ರೇಣಿ ನಿಗದಿಯಾಗದೆ ಕರ್ತವ್ಯ ನಿರ್ವಹಿಸುತ್ತಿರುವ ಬಾಕಿ ಉಳಿದ ದೇವಾಲಯದ ನೌಕರರು ತಾತ್ಕಾಲಿಕ ನೆಲೆಯಲ್ಲಿ ಅಂದರೆ, ಸಂಚಿತ, ವೋಚರ್, ಎನ್.ಎಂ.ಆರ್. ದಿನಗೂಲಿ, ಹಂಗಾಮಿ, ನಿಗದಿತ ವೇತನ, ಕಾರ್ಯಾರ್ಥ ಏರ್ಪಾಟು ಈ ರೀತಿ ಯಾವುದೇ ನೇಮಕಾತಿಯಾಗಿರಲಿ, ಅವರು ವೇತನವನ್ನು ಅಥವಾ ಗೌರವ ಧನದ ರೂಪದಲ್ಲಿ ವೇತನ ಪಡೆಯುತ್ತಿರುವ ದೇವಾಲಯದ ನೌಕರರುಗಳಿಗೆ ಮೇಲೆ ಪ್ರಸ್ತಾಪಿಸಿರುವ ನೇಮಕಾತಿ ವಿಧಾನಗಳನ್ನು ಇನ್ನು ಮುಂದೆ ಅನುಸರಿಸದಂತೆ ಹಾಗೂ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು: 2002ರ ನಿಯಮ 12 ಹಾಗೂ ತಿದ್ದುಪಡಿ ನಿಯಮಗಳ ನೇಮಕಾತಿ ವಿಧಾನವನ್ನು ಕಡ್ಡಾಯವಾಗಿ ಪಾಲಿಸುವ ಷರತ್ತಿಗೊಳಪಟ್ಟು, ಒಂದು ಬಾರಿಯ ಕ್ರಮವಾಗಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ನಿಯಮಗಳು, 2019ರ ನಿಯಮ 8ರ ಕೋಷ್ಟಕದಲ್ಲಿ ನಿಗದಿಪಡಿಸಿರುವ ವೇತನ ಶ್ರೇಣಿ ಮತ್ತು ಇತರೆ ಭತ್ಯೆಗಳಾದ ಡಿ.ಎ & ಹೆಚ್.ಆರ್.ಎ ಇನ್ನಿತರೆ ಭತ್ಯೆಗಳನ್ನು ಒಳಗೊಂಡಂತೆ ವೇತನ ಶ್ರೇಣಿ ನಿಗದಿಪಡಿಸಲು ಕೆಲವು ಷರತ್ತುಗಳಿಗೊಳಪಡಿಸಿ ಕೆಳಕಂಡ ವೇತನ ಶ್ರೇಣಿಗಳನ್ನು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

| ಕ್ರ ಸಂ. | ಹುದ್ದೆಯ ಪದನಾಮ | ವೇತನ ಶ್ರೇಣಿ ಸಂಸ್ಥೆಗಳು ಪ್ರವರ್ಗ-1 | ವೇತನ ಶ್ರೇಣಿ ಸಂಸ್ಥೆಗಳು ಪ್ರವರ್ಗ-2 |
|---|---|---|---|
| 1 | ಗ್ರೂಪ್ 'ಸಿ' | 11600-24600 | 7275-17250 |
| 2 | ಗ್ರೂಪ್ 'ಡಿ' | 9600-24600 | 6000-15600 |

ಹೀಗೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಸಮಿತಿಯು ದಿನಾಂಕ: 07-12-2018ರಂದು ಸಲ್ಲಿಸಿದ್ದ ವರದಿಯಲ್ಲಿ ಈಗಾಗಲೇ ಸರ್ಕಾರಿ ವೇತನ ಶ್ರೇಣಿಗೆ ಸಮನಾಗಿ 5ನೇ ವೇತನ ಶ್ರೇಣಿ ಪಡೆಯುತ್ತಿದ್ದ 1111 ಮಂದಿ ದೇವಾಲಯದ ನೌಕರರಿಗೆ

.....4

ನೌಕರರುಗಳಿಗೆ ಅವರ ಸೇವಾ ಹಿರಿತನ ಪರಿಗಣಿಸಿ, ಮೂಲ ವೇತನಕ್ಕೆ ಶೇಕಡ 10ರಷ್ಟು ವೈಟೇಜ್ ಮತ್ತು ಮೂಲ ವೇತನಕ್ಕೆ ಶೇಕಡ 20ರಷ್ಟು ತುಟ್ಟಿಭತ್ಯೆ ವಿಲೀನಗೊಳಿಸಿ ಪರಿಷ್ಕೃತ ವೇತನವನ್ನು ಮಂಜೂರು ಮಾಡುವ ಬಗ್ಗೆ ವೇತನ ಶ್ರೇಣಿ ಹಾಗೂ ತಃಖ್ತೆಯನ್ನು ಶಿಫಾರಸ್ಸು ಮಾಡಿರುತ್ತದೆ.

ಆದರೆ ಸದರಿ ತಿದ್ದುಪಡಿ ನಿಯಮಗಳಲ್ಲಿ ಈಗಾಗಲೇ ರಾಜ್ಯ ಸರ್ಕಾರಿ 5ನೇ ವೇತನ ಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದೇವಾಲಯಗಳ ನೌಕರರುಗಳಿಗೆ ವೇತನ ಶ್ರೇಣಿ/ವೇತನಗಳ ಪರಿಷ್ಕರಣೆ ಕುರಿತಂತೆ ಪ್ರಸ್ತಾಪಿಸಿರುವುದಿಲ್ಲ.

ಆದ್ದರಿಂದ, 5ನೇ ಸರ್ಕಾರಿ ವೇತನ ಶ್ರೇಣಿ ಪಡೆದು ವಿವಿಧ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1111 ಮಂದಿ ನೌಕರರುಗಳಿಗೆ ಸರ್ಕಾರಿ 6ನೇ ವೇತನ ಆಯೋಗದ ಶಿಫಾರಸ್ಸಿನ ವೇತನ ಶ್ರೇಣಿ ನೀಡಲು ಇಲಾಖೆಯ ಗ್ರೂಪ್ 'ಎ' ಮತ್ತು 'ಬಿ' ಅಧಿಸೂಚಿತ ಸಂಸ್ಥೆಗಳಲ್ಲಿ ಯಾವ ಸಂಸ್ಥೆಯಲ್ಲಿ ಸಿಬ್ಬಂದಿ ವೆಚ್ಚವು ಶೇಕಡ 35 ಮೀರುವುದಿಲ್ಲವೋ ಅಂತಹ ಸಂಸ್ಥೆಯ ದೇವಾಲಯದ ನೌಕರರಿಗೆ 6ನೇ ವೇತನ ಶ್ರೇಣಿ ಮಂಜೂರು ಮಾಡಲು ಪರಿಶೀಲಿಸಲಾಗುತ್ತಿದೆ.

(ಸಂಖ್ಯೆ: ಕಂಇ 33 ಮುಸಪ್ರ 2021)

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.